
ಬರುತ್ತವೆ' ಎನ್ನುವ ಮಾತುಗಳ ಆಳದಲ್ಲಿ ಬಹು ಮುಖ್ಯವಾದ ಧೋರಣೆ ಇದೆ. ಹಾಗೆಯೇ, ಅದು ಭಿನ್ನವಾದ ಒಂದು ಚಿತ್ರವನ್ನೂ ಕೊಡುತ್ತದೆ.

ಈ ಕಾದಂಬರಿಯಲ್ಲಿ ನಂಜನಗೂಡು ಮತ್ತು ಮೈಸೂರು ಮುಖ್ಯವಾದ ಪ್ರಾಂತ್ಯಗಳಾಗಿವೆ. ಕಳೆದ ಶತಮಾನದ ಕೊನೆಯ ಭಾಗದಲ್ಲಿ ಅನೇಕ ತಿರುವುಗಳು ಕಾಣಿಸುತ್ತವೆ. ಕೆಲವು ರೀತಿಯ ಗುಂಪುಗಳು ಪ್ರಾರಂಭವಾದವು. ಜಾತಿ, ವರ್ಗ, ಹಿಡುವಳಿ ಮುಂತಾದವು ಮಹತ್ವದ ಪ್ರಶ್ನೆಗಳಾದವು. ಕೆಲವು ತಾತ್ವಿಕತೆಗಳು ಮುಂಚೂಣಿಗೆ ಬಂದವು. ಸುಶಿಕ್ಷಿತರು ಮತ್ತು ಅನಕ್ಷರಸ್ಥರ ನಡುವೆ ಒಂದು ಅಂತರವೂ ಸೃಷ್ಟಿಯಾಯಿತು. ಇದರ ಜೊತೆಗೆ ಅತ್ಯಂತ ವೇಗವಾಗಿ ಬದಲಾದ ಒಂದು ಸಂಗತಿ ಎಂದರೆ, ಮಾರುಕಟ್ಟೆ. ಇದು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮ ಏನು ಎನ್ನುವುದನ್ನು ಯಾರಿಗೂ ಮೊದಲೇ ಊಹಿಸಲಾಗಲಿಲ್ಲ. ಅದರಲ್ಲಿ ಹೆಚ್ಚು ಬೆಳೆಯಿರಿ ಎನ್ನುವ ಒಂದು ನೆಲೆ ಮಾತ್ರ ಇತ್ತು. ಅದರ ಜೊತೆಗೆ ಬೃಹತ್ ಕೈಗಾರಿಕೆಗಳಿಗೆ ಮಾನ್ಯತೆ ದೊರೆಯಿತು. ನೆಹರೂ ಆಧುನಿಕತೆಗೆ ಹೆಚ್ಚು ಒತ್ತುಕೊಟ್ಟು ಹೇಳಿದರು. ಅದು ಅವರ ಕನಸೂ ಹೌದು. ಇದರಿಂದ ಹಳ್ಳಿ ಮತ್ತು ನಗರಗಳ ನಡುವೆ ಉಂಟಾದ ಅಂತರವೂ ದೊಡ್ಡದು. ಅದರ ಜೊತೆಗೆ ಶಿಕ್ಷಣ, ಲಿಂಗ ತಾರತಮ್ಯ ಮುಖ್ಯವಾಯಿತು. ಅನೇಕರು ಈ ಪ್ರಶ್ನೆಗಳನ್ನು ಗಟ್ಟಿಧ್ವನಿಯಲ್ಲಿ ಕೇಳಿದ್ದು ಸತ್ಯ. ಇದರ ನಡುವೆ ರೈತರ ಸಮಸ್ಯೆ ಬಿಗಡಾಯಿಸಿತು. ಲೇಖಕಿ ಇದನ್ನು ಕಾದಂಬರಿಯಲ್ಲಿ ಬೇರೆ ಕ್ರಮದಲ್ಲಿ ನೋಡುತ್ತಾರೆ. ಅನೇಕರು ಜೀವನೋಪಾಯಕ್ಕೆ ಹಳ್ಳಿಯಿಂದ ನಗರಕ್ಕೆ ಹೋದರು. ವ್ಯಾಪಾರದ ಗುಟ್ಟನ್ನು ಕಲಿತರು. ಒಂದು ಎಕರೆಯಲ್ಲಿ ಗುದ್ದಾಡುವುದಕ್ಕಿಂತ ನಗರದಲ್ಲಿ ನಾಲ್ಕು ಇಡ್ಲಿ ಮಾರಾಟ ಮಾಡಿದರೆ ಲಾಭವಿದೆ ಎಂದು ಅರ್ಥವಾದ್ದರಿಂದ, ಅದರಿಂದಾದ ದೊಡ್ಡ ಪಲ್ಲಟವನ್ನು ಕಾಣುತ್ತೇವೆ. ಸ್ವಾತಂತ್ರ್ಯ ಬಂದ ಮೇಲಿನ ಅತ್ಯಂತ ಮುಖ್ಯವಾದ ವಿದ್ಯಮಾನ ಇದು. ಪಟ್ಟಣದಲ್ಲಿ ನಾಲ್ಕು ಗರಿ ಹೊದೆಸಿ ಬೀಡಾಸ್ಟಾಲ್ ಇಟ್ಟರೆ ಅನುಕೂಲ ಎನ್ನುವುದು ಒಂದು ಅಂಶವಾದರೆ, ಕೃಷಿ ಎನ್ನುವುದು ಲಾಭವೋ ನಷ್ಟವೋ ಎನ್ನುವುದೂ ಚರ್ಚೆಯ ಕೇಂದ್ರವಾಯಿತು. ಕಾದಂಬರಿ ಇದನ್ನೇ ನಮಗೆ ಹೇಳುತ್ತದೆ. ಇದು ಬದಲಾದ ಕಾಲವನ್ನು ಹಿಡಿದಿಡಲು ಪ್ರಯತ್ನಿಸುತ್ತದೆ. ಇದರಲ್ಲಿ ಹಳ್ಳಿ ಮತ್ತು ನಗರ ಎನ್ನುವುದು ನಮ್ಮ ಜೀವನವನ್ನು ಹೇಗೆ ಪರಿವರ್ತಿಸುತ್ತದೆ ಎಂಬುದು ಇದೆ. ಕಾಲದೊಂದಿಗೆ ಪ್ರದೇಶವೂ ಒಳಗೊಳ್ಳುವುದು ಕಾದಂಬರಿಯ ಒಂದು ತಾತ್ವಿಕ ಭಿತ್ತಿಯಾಗಿದೆ. ಕೇಂದ್ರಪಾತ್ರ ದೊಡ್ಡತಾಯಿಗೆ ಒಂದು ವಿಶಿಷ್ಟ ಜೀವಂತಿಕೆ ಇದೆ. ಆಕೆ ಗಟ್ಟಿ ಹೆಂಗಸು, ವಿವೇಕವನ್ನು ಇಟ್ಟುಕೊಂಡವಳು. ಅವಳು ಇಲ್ಲಿನ ಅತ್ಯಂತ ಮುಖ್ಯವಾದ ಪಾತ್ರ. ಅವಳು ತನ್ನ ಜೀವನವನ್ನು ಹೇಗೆ ಕಟ್ಟಿಕೊಳ್ಳುತ್ತಾಳೆ ಎನ್ನುವುದು ಇಲ್ಲಿ ಮುಖ್ಯ. ತನ್ನ ಬದುಕನ್ನು ಕಟ್ಟಿಕೊಳ್ಳಲು ಅವಳು ನಡೆಸುವ ಹೋರಾಟ ಅತ್ಯಂತ ಮುಖ್ಯವಾದದ್ದು. ಅವಳೇ ಈ ಕಾದಂಬರಿಯಲ್ಲಿ ಮುಖ್ಯವಾದರೂ ಇಲ್ಲಿ ಇತರ ಸ್ತ್ರೀ ಪಾತ್ರಗಳಿಗೂ ಮಹತ್ವ ದೊರಕಿದೆ. (ಗಂಗವ್ವ, ದ್ಯಾಮವ್ವ




**ದೊಡ್ಡತಾಯಿ**
ಕಾದಂಬರಿ
ಲೇ:ಎಂ.ಎಸ್. ವೇದಾ
ಪು: 688 ಬೆ: ₹ 625
ಪ್ರ: ಸಂವಹನ 12/1ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು – 570 001